ಕರ್ನಾಟಕ ಸರ್ಕಾರ

ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ

ವಾರ್ತಾ ಸೌಧ, ಸಂಖ್ಯೆ 17, ಭಗವಾನ್ ಮಹಾವೀರ ರಸ್ತೆ, ಬೆಂಗಳೂರು – 560 001.

ಸಂಖ್ಯೆ : ವಾಸಾಸಂಇ : ಉ ನಿ : ಸುಮಪ : 2015–16 : ದಿನಾಂಕ: 9–4–2015

# ಪತ್ರಿಕಾ ಆಮಂತ್ರಣ

| ಕ್ರಮ ಸಂಖ್ಯೆ | ಕಾರ್ಯಕ್ರಮಗಳ ವಿವರ | ದಿನಾಂಕ ಸಮಯ | ಕಾರ್ಯಕ್ರಮ ನಡೆಯುವ ಸ್ಥಳ |
|---|---|---|---|
| 1. | Inaugural Function of COM-VISION – 2015<br><br>Chief Guest:<br><br>Shri R. Roshan Baig<br><br>Minister for Infrastructure Development, Information and Haj.<br><br>Cultural Programme:<br><br>Inauguration:<br><br>Ragini Dwivedi,<br>Kannada Film Actress | 10–4–2015<br>Friday<br>at<br>10-00 AM<br><br>5-30 PM | Jnana Jyothi Auditorium Bangalore University Campus, Bangalore |
| 2. | ಕೃಷಿ ಮತ್ತು ತೋಟಗಾರಿಕೆ ಬೆಳೆಗಳ ಉತ್ಪಾದನಾ ವೆಚ್ಚವನ್ನು ವೈಜ್ಞಾನಿಕವಾಗಿ ಲೆಕ್ಕಾಚಾರ ಹಾಗೂ ಕಾರ್ಯಾಗಾರ.<br><br>ಉದ್ಘಾಟನಾ ಭಾಷಣ:<br><br>ಡಾ. ಅಶೋಕ್ ವಿಶಾನ್‌ದಾಸ್,<br>ಅಧ್ಯಕ್ಷರು,<br>ಕೃಷಿ ವೆಚ್ಚ ಮತ್ತು ಬೆಲೆ ಆಯೋಗ.<br><br>ಕೈಪಿಡಿ ಬಿಡುಗಡೆ ಮತ್ತು ಅಧ್ಯಕ್ಷತೆ:<br><br>ಶ್ರೀ ಕೃಷ್ಣ ಭೈರೇಗೌಡ,<br>ಕೃಷಿ ಖಾತೆ ರಾಜ್ಯ ಸಚಿವರು. | 10–4–2015<br>ಶುಕ್ರವಾರ<br>ಬೆಳಿಗ್ಗೆ<br>10–00 ಗಂಟೆಗೆ | ಸಮೃದ್ಧಿ ಸಭಾಂಗಣ,<br>ಕೃಷಿ ಇಲಾಖೆ ಆವರಣ,<br>ಶೇಷಾದ್ರಿ ರಸ್ತೆ,<br>ಬೆಂಗಳೂರು. |

ನಿರ್ದೇಶಕರ ಪರವಾಗಿ

## ಪತ್ರಿಕಾ ಪ್ರಕಟಣೆ

# ಬೇಸಿಗೆ ಶಿಬಿರ

ಬೆಂಗಳೂರು, ಏಪ್ರಿಲ್ 9 (ಕರ್ನಾಟಕ ವಾರ್ತೆ)

ಬಾಲ ಭವನವು ಮಕ್ಕಳಿಗಾಗಿ ಬೇಸಿಗೆ ಶಿಬಿರವನ್ನು ಕೇಂದ್ರ ಬಾಲ ಭವನ ಹಾಗೂ ಜಯನಗರ, ರಾಜಾಜಿನಗರ, ಕೋಲ್ಸ್ ಪಾರ್ಕ್ ಮಿನಿ ಬಾಲ ಭವನಗಳಲ್ಲಿ, ದಿನಾಂಕ 12–04–2015 ರಿಂದ 10–5–2015 ರವರೆಗೆ ಹಮ್ಮಿಕೊಂಡಿದೆ.

5 ರಿಂದ 16 ವರ್ಷದ ಮಕ್ಕಳಿಗೆ ನಡೆಸುವ ಈ ಶಿಬಿರವು ಕ್ರಿಯಾತ್ಮಕ ಹಾಗೂ ಸೃಜನಾತ್ಮಕ ಚಟುವಟಿಕೆಗಳಾದ ಚಿತ್ರಕಲೆ, ಕರಕುಶಲಕಲೆ, ಜೇಡಿಮಣ್ಣಿನ ಕಲೆ, ಸಮೂಹನೃತ್ಯ/ಸಂಗೀತ, ಯೋಗ ಹಾಗೂ "ರಂಗರುಚಿ" ಎಂಬ ಶೀರ್ಷಿಕೆಯಡಿ ವಿಭಿನ್ನ ಕಥೆ, ಕವನ, ನೃತ್ಯ, ನಾಟಕಗಳ ಕಲಾ ಸಮ್ಮಿಲನ ಕಾರ್ಯಕ್ರಮವನ್ನು ಹಮ್ಮಿಕೊಂಡಿದೆ.

ಹೆಚ್ಚಿನ ವಿವರಗಳಿಗೆ ಕಾರ್ಯದರ್ಶಿಗಳ ಕಾರ್ಯಾಲಯ, ಕಬ್ಬನ್ ಉದ್ಯಾನವನ, ಬೆಂಗಳೂರು, ಇಲ್ಲಿ ಖುದ್ದಾಗಿ ಅಥವಾ ದೂರವಾಣಿ ಸಂಖ್ಯೆ: 080 – 22861423/22864189.

ಬಾಬು:ಜಿಪಿಆರ್.

# SUMMER CAMP

**Bangalore, April 9, (Karnataka Information)**

**Jawahar Bal Bhavan is conducting Summer Camp at Central Bal Bhavan and also at Jayanagar, Rajajinagar, Coles Park Mini Bal Bhavan, for children in the age group of 05 to 16 years from 12-04-2015 to 10-05-2015.**

**Various Creative and Performing activities like Craft, Painting, Clay Modeling, Group Music/Dance, Yoga, etc., and also Theatre Activitiers undedr the title "Ranga Ruchi" are offered.**

**For more details kindly contact the Office of the Secretary, Bal Bhavan Society, Cubbon Partk, Bangalore, either in person or through Telephone No 080 – 22864189/22861423.**

Babu:gpr

## APPLICATIONS INVITED FOR POST OF CIVIL JUDGES

**Bangalore, April 9, (Karnataka Information)**

**Applications are invited from the eligible candidates for the post of Civil Judges under the Karnataka Judicial Services (Recruitment) Rules, 2004 and (Amendment) Rules, 2011 & 2015.**

**The last date for receipt of Online application is 15th May, 2015 (11.59 PM).**

**For details please refer to Notification No CJRC-1/2014 dated 31.03.2015 published in the Karnataka Extra-ordinary Gazette dated 31.03.2015 at Part-V pages 1 to 10 and also High Court Website at www.karnatakajudiciary.kar.nic.in.**

Babu:gpr

## ವಿದ್ಯುತ್ ಮಗ್ಗ ನೇಕಾರರುಗಳಿಂದ 42 ಲಕ್ಷ ಮೀಟರ್ ಸಮವಸ್ತ್ರ ಬಟ್ಟೆ ಪೂರೈಕೆಗೆ ಕ್ರಮ

– ಸಚಿವ ಬಾಬುರಾವ್ ಚಿಂಚನಸೂರ್

ಬೆಂಗಳೂರು, ಏಪ್ರಿಲ್ 9 (ಕರ್ನಾಟಕ ವಾರ್ತೆ)

"ನನ್ನ ಖಾತೆಗೆ ಸಂಬಂಧಿಸಿದಂತೆ ನಾನು ಶಿಕ್ಷಣ ಇಲಾಖೆಯೊಂದಿಗೆ ಸಾಕಷ್ಟು ಪ್ರಯತ್ನ ಮತ್ತು ಪರಿಶ್ರಮವಹಿಸಿ ಪ್ರಸ್ತುತ ಸಾಲಿಗೆ 42 ಲಕ್ಷ ಮೀಟರ್ ಸಮವಸ್ತ್ರ ಬಟ್ಟೆಯನ್ನು ವಿದ್ಯುತ್ ಮಗ್ಗ ನೇಕಾರರುಗಳಿಂದ ನೇಯಿಸಿ, ಶಿಕ್ಷಣ ಇಲಾಖೆಗೆ ಪೂರೈಸುವ ಬಗ್ಗೆ ಸರ್ಕಾರದಿಂದ ಆದೇಶ ಪಡೆಯಲಾಗಿದೆ" ಎಂದು ಜವಳಿ, ಬಂದರು ಮತ್ತು ಒಳನಾಡು ಜಲಸಾರಿಗೆ ಸಚಿವ ಶ್ರೀ ಬಾಬುರಾವ್ ಚಿಂಚನಸೂರ್ ಪತ್ರಿಕಾ ಹೇಳಿಕೆಯಲ್ಲಿ ತಿಳಿಸಿದ್ದಾರೆ.

ಸಮವಸ್ತ್ರ ಉತ್ಪಾದನೆ ನಿರ್ವಹಣೆಗೆ ಅನುಸರಿಸಬೇಕಾದ ಯಾವುದೇ ದಾಖಲಾತಿಗಳನ್ನು ಘಟಕಗಳಲ್ಲಿ ಕಂಡು ಬರುವುದಿಲ್ಲ. ಹೀಗೆ ತನಿಖಾಧಿಕಾರಿಗಳು ಸಲ್ಲಿಸಿದ ಸುದೀರ್ಘ ಮತ್ತು ನೈಜ ವರದಿಯ ಆಧಾರದ ಮೇಲೆ

ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಗಳು, ವಾಣಿಜ್ಯ ಮತ್ತು ಕೈಗಾರಿಕಾ ಇಲಾಖೆ ಇವರು ಸರ್ಕಾರದ ಮಟ್ಟದಲ್ಲಿ ಒಂದು ತೀರ್ಮಾನ ತೆಗೆದುಕೊಂಡು ಪ್ರಸ್ತುತ ಸಾಲಿನ ವಿದ್ಯಾವಿಕಾಸ ಯೋಜನೆಯ ಅಡಿಯಲ್ಲಿ ಕರ್ನಾಟಕ ಜವಳಿ ಮೂಲಸೌಲಭ್ಯ ಅಭಿವೃದ್ಧಿ ನಿಗಮಕ್ಕೆ ಶಿಕ್ಷಣ ಇಲಾಖೆಯಿಂದ ನೀಡಲಾಗಿದ್ದ ಒಟ್ಟು 42.00 ಲಕ್ಷ ಮೀಟರ್ ಬಟ್ಟೆಯ ಪೈಕಿ 21.00 ಲಕ್ಷ ಮೀಟರ್ ಬಟ್ಟೆಯನ್ನು ಕರ್ನಾಟಕ ಕೈಮಗ್ಗ ಅಭಿವೃದ್ಧಿ ನಿಗಮದಿಂದ ಶಿಕ್ಷಣ ಇಲಾಖೆಗೆ ನೀಡುವುದು. ಉಳಿದ 21.00 ಲಕ್ಷ ಮೀಟರ್ ಬಟ್ಟೆಯನ್ನು ಕರ್ನಾಟಕ ರಾಜ್ಯ ಜವಳಿ ಮೂಲಸೌಲಭ್ಯ ಅಭಿವೃದ್ಧಿ ನಿಗಮವು ಟೆಂಡರ್ ಆಹ್ವಾನಿಸಿ ಸಮವಸ್ತ್ರ ಖರೀದಿಸಿ, ಶಿಕ್ಷಣ ಇಲಾಖೆಗೆ ಪೂರೈಸುವುದು ಎಂದು ದಿನಾಂಕ 17-03-2015 ರಂದು ಸರ್ಕಾರಿ ಆದೇಶವಾಗಿದೆ ಎಂದು ಸಚಿವರು ತಮ್ಮ ಪತ್ರಿಕಾ ಪ್ರಕಟಣೆಯಲ್ಲಿ ವಿವರಿಸಿದ್ದಾರೆ.

ಬಾಬು:ಜಿಪಿಆರ್.

## ಬೃಹತ್ ಬೆಂಗಳೂರು ನಗರ ಪಾಲಿಕೆ : ಮೂರು ಭಾಗಗಳಾಗಿ ವಿಭಜಿಸಲು ನಿರ್ಧಾರ

**ಬೆಂಗಳೂರು, ಏಪ್ರಿಲ್ 9 (ಕರ್ನಾಟಕ ವಾರ್ತೆ)**

ಬೃಹತ್ ಬೆಂಗಳೂರು ಮಹಾನಗರಪಾಲಿಕೆಯನ್ನು ಮೂರು ಭಾಗಳಾಗಿ ವಿಭಜನೆ ಮಾಡಲು ಸರ್ಕಾರ ನಿರ್ಧಾರ ಕೈಗೊಂಡಿದ್ದು, ಈ ಸಂಬಂಧ ರಾಜ್ಯಪಾಲರಿಗೆ ಸರ್ಕಾರದ ನಿರ್ಧಾರವನ್ನು ತಿಳಿಸಲಾಗಿದ್ದು ಕಾನೂನು ಚೌಕಟ್ಟಿನಲ್ಲಿ ಕ್ರಮ ಕೈಗೊಳ್ಳುವುದಾಗಿ ರಾಜ್ಯಪಾಲರು ತಿಳಿಸಿದ್ದಾರೆ ಎಂದು ಕಾನೂನು ಸಚಿವ ಟಿ.ಬಿ. ಜಯಚಂದ್ರ ತಿಳಿಸಿದರು.

ವಿಧಾನಸೌಧದ ತಮ್ಮ ಕಚೇರಿಯಲ್ಲಿ ಸುದ್ದಿಗಾರರೊಂದಿಗೆ ಮಾತನಾಡಿದ ಸಚಿವರು ಬೆಂಗಳೂರು ಮಹಾನಗರಪಾಲಿಕೆಯು ಆರ್ಥಿಕ ಸ್ಥಿತಿಗತಿ ಗಮನಿಸಿದಾಗ ಸುಮಾರು ನಾಲ್ಕು ಸಾವಿರ ಕೋಟಿ ರೂ. ಬಿಲ್ಲುಗಳು ಬಾಕಿ ಇವೆ. ಅಲ್ಲದೆ ನಗರೋಥ್ಯಾನ ಯೋಜನೆಯಡಿ ಕಾರ್ಯಕ್ರಮ ಸಮರ್ಪಕವಾಗಿ ಕೈಗೆತ್ತಿಗೊಂಡಿಲ್ಲ ಎಂದರು.

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ವಿಭಜನೆಯ ವಿಷಯದ ಸಾಧಕ ಬಾಧಕಗಳ ಬಗ್ಗೆ ಸಚಿವ ಸಂಪುಟದಲ್ಲಿ ಚರ್ಚೆ ಮಾಡಲಾಗಿದ್ದು ಬಿ.ಬಿ.ಎಂ.ಪಿ.ಯು ಜನರಿಗೆ ಮೂಲಭೂತ ಸೌಲಭ್ಯ ಕಲ್ಪಿಸಲು ಸಾಧ್ಯವಾಗುತ್ತಿಲ್ಲ ಇದನ್ನು ಮನಗಂಡು ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯನ್ನು ಮೂರು ಭಾಗಗಳಾಗಿ ವಿಭಜನೆ ಮಾಡಲು ತೀರ್ಮಾನಿಸಲಾಯಿತು ಎಂದರು.

ಮೇಕೆದಾಟು ಯೋಜನೆಯ ಯೋಜನಾ ವರದಿ ಸಿದ್ಧಪಡಿಸಲು ಅಧಿಕಾರಿಗಳಿಗೆ ಸೂಚಿಸಲಾಗಿದೆ ಎಂದ ಕಾನೂನು ಸಚಿವರು ವರದಿ ಬಂದ ತಕ್ಷಣ ಮುಖ್ಯಮಂತ್ರಿಗಳ ಅಧ್ಯಕ್ಷತೆಯಲ್ಲಿ ಸಭೆ ನಡೆಸಿ ಅಂತಿಮ ತೀರ್ಮಾನ ಕೈಗೊಳ್ಳಲಾಗುವುದು ಎಂದರು.

ಬಾಬು:ಜಿಪಿಆರ್.